# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀಮತಿ ಭವಾನಿ ಕೋಂ ನಾರಾಯಣ, ಹಿಂದಿನ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು ಮತ್ತು ಶ್ರೀ ಆಸೀಫ್ ಅಲಿ ಅಬ್ದುಲ್ ಗಫಾರ ಗನಿ ಹಿಂದಿನ ಉಪಾಧ್ಯಕ್ಷರು ಹಾಗೂ ಹಾಲಿ ಸದಸ್ಯರು, ಚಂದಾವರ ಗ್ರಾಮ ಪಂಚಾಯತಿ, ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರುಗಳ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

ಓದಲಾಗಿದೆ:

1. ಅಪರ ನಿಬಂಧಕರು, ವಿಚಾರಣೆಗಳು–6, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ ಕಂಪ್ಲೇಂಟ್/ ಉಪಲೋಕ್/ಬಿಜಿಎಂ–7066/2014/ಎಆರ್‌ಇ–6, ದಿನಾಂಕ 27.04.2015.
2. ಸರ್ಕಾರದ ಸಮಸಂಖ್ಯೆಯ ದಿನಾಂಕ: 23.06.2016 ರ ಕಾರಣ ಕೇಳುವ ನೋಟೀಸ್.
3. ಶ್ರೀಮತಿ ಭವಾನಿ ಕೋಂ ನಾರಾಯಣ, ಹಿಂದಿನ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು ಮತ್ತು ಶ್ರೀ ಆಸೀಫ್ ಅಲಿ ಅಬ್ದುಲ್ ಗಫಾರ ಗನಿ ಹಿಂದಿನ ಉಪಾಧ್ಯಕ್ಷರು ಹಾಗೂ ಹಾಲಿ ಸದಸ್ಯರು, ಚಂದಾವರ ಗ್ರಾಮ ಪಂಚಾಯತಿ, ಹೊನ್ನಾವರ ತಾಲ್ಲೂಕು, ಇವರು ಕಾರಣ ಕೇಳುವ ನೋಟೀಸಿಗೆ ನೀಡಿರುವ ಲಿಖಿತ ಹೇಳಿಕೆ, ದಿನಾಂಕ:04.08.2016.
4. ವಿಚಾರಣಾ ತಿಳುವಳಿಕೆ ಪತ್ರ, ದಿನಾಂಕ: 17.08.2016.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಲಗತ್ತಿಸಿ ಕಳುಹಿಸಿರುವ ದಿನಾಂಕ: 27.04.2015 ರ ಅಪರ ನಿಬಂಧಕರು, ವಿಚಾರಣೆಗಳು–6, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರ ಪತ್ರದ ಸಂಗಡ ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ಕಾಯ್ದೆ ಪ್ರಕರಣ 12(3) ರ ಅಡಿ ಸಲ್ಲಿಸಿರುವ ದಿನಾಂಕ 17.04.2015 ರ ವರದಿಯಲ್ಲಿ ಶ್ರೀ ಅಣ್ಣಪ್ಪ ನಾರಾಯಣ ಮುಕ್ರಿ ಮತ್ತು ಶ್ರೀ ಗಣಪತಿ ಶ್ರೀಧರ ಮಾದಿವಾರಿ ಇಬ್ಬರೂ ಚಂದಾವರ ಗ್ರಾಮಸ್ಥರು, ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರು ಶ್ರೀಮತಿ ಭವಾನಿ ಕೋಂ ನಾರಾಯಣ, ಅಧ್ಯಕ್ಷರು ಹಾಗೂ ಶ್ರೀ ಆಸೀಫ್ ಅಲಿ ಅಬ್ದುಲ್ ಗಫಾರ ಗನಿ ಉಪಾಧ್ಯಕ್ಷರು, ಚಂದಾವರ ಗ್ರಾಮ ಪಂಚಾಯತಿ, ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರುಗಳ ವಿರುದ್ಧ ದೂರು ದಾಖಲಿಸಿ ಚಂದಾವರ ಗ್ರಾಮದ ಸರ್ವೆ ನಂ. 223/ಬಿ, ರಲ್ಲಿ ಹೊನ್ನಾವರ ತಾಲ್ಲೂಕಿನ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಇವರು ಸದರಿ ಜಾಗದಲ್ಲಿ ಕೆಳಮಹಡಿಯನ್ನು ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಪಂಚಾಯತಿ ಮುಖ್ಯರಸ್ತೆಯಿಂದ ನಿಗದಿತ ಸೆಟ್ ಬ್ಯಾಕ್ ಬಿಡದೆ ಕಟ್ಟಿದ್ದಾರೆ ಎಂದು ತಿಳಿಸಿದ್ದರೂ ಸಹ, ದಿನಾಂಕ 28.07.2014 ರಂದು ನಡೆದ ಗ್ರಾಮ ಪಂಚಾಯತಿಯ ಸಭೆಯಲ್ಲಿ ಮೊದಲನೇ ಮಹಡಿ ನಿರ್ಮಿಸಲು ಅನುಮತಿ ನೀಡಿ ಕರ್ತವ್ಯಲೋಪವೆಸಗಿರುವುದರಿಂದ ಗ್ರಾಮ ಪಂಚಾಯತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದಡಿ ಕ್ರಮ ಕೈಗೊಳ್ಳಲು ಮಾನ್ಯ ಉಪಲೋಕಾಯುಕ್ತರು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಶ್ರೀಮತಿ ಭವಾನಿ ಕೋಂ ನಾರಾಯಣ, ಹಿಂದಿನ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು ಮತ್ತು ಶ್ರೀ ಆಸೀಫ್ ಅಲಿ ಅಬ್ದುಲ್ ಗಫಾರ ಗನಿ ಹಿಂದಿನ ಉಪಾಧ್ಯಕ್ಷರು ಹಾಗೂ ಹಾಲಿ ಸದಸ್ಯರು, ಚಂದಾವರ ಗ್ರಾಮ ಪಂಚಾಯತಿ, ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರಿಗೆ ಕಾರಣ ಕೇಳುವ ನೋಟೀಸ್ ಜಾರಿಗೊಳಿಸಲಾಗಿದ್ದು, ಸದರಿ ಕಾರಣ ಕೇಳುವ ನೋಟೀಸಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಸದರಿಯವರು ಲಿಖಿತ ಹೇಳಿಕೆ ನೀಡಿ ಚಂದಾವರ ಗ್ರಾಮದ ಸರ್ವೆ ನಂ. 223/ಬಿ ಪೈಕಿ 0–01–12 ರ ಮಾಲೀಕರಾದ ಶ್ರೀ ಮಹಮದ್ ಸಾಬ್ ಅಬ್ದುಲ್ ವಹಾಬ್ ಇವರು ತಮ್ಮ ಕಟ್ಟಡದ 1ನೇ ಮಹಡಿ ಕಟ್ಟಿಸಲು ಕಟ್ಟಡ ಪರವಾನಗಿ ಕೋರಿ ಅರ್ಜಿ ಸಲ್ಲಿಸಿದಾಗ ಆ ಬಗ್ಗೆ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ವಿಷಯ ಚರ್ಚೆಯಿಂದ, ಪಿ.ಡಬ್ಲ್ಯುಡಿ. ಇಲಾಖೆಗೆ ಪತ್ರ ಬರೆದು ರಸ್ತೆಯ ಕುರಿತಾದ ಸ್ಥಳ ಅತಿಕ್ರಮಣ ವಗೈರೆಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಬೇಕಾಗಿ ನಿರ್ಣಯವಾದಂತೆ ಪತ್ರ ಬರೆದಿರುವ ಬಗ್ಗೆ ತಿಳಿಯುತ್ತದೆ ಹಾಗೂ ಮೌಖಿಕವಾಗಿ

ಸಹ ವಿನಂತಿಸಲಾಗಿತ್ತು. ಆದರೆ ಈ ಬಗ್ಗೆ ಸಂಬಂಧಿಸಿದ ಸದರಿ ಇಲಾಖೆಯಿಂದ ಯಾವುದೇ ಸರಿಯಾದ ಮಾಹಿತಿ ಆಕ್ಷೇಪ ವಗೈರೆ ಬಂದಿರಲಿಲ್ಲ ಎಂದು ತಿಳಿಸಿದ್ದಾರೆ.

ಮುಂದುವರೆದು ದಿನಾಂಕ 27.08.2014 ರಂದು ನಡೆದ ಸಾಮಾನ್ಯ ಸಭೆಯಲ್ಲಿ ನಡೆದ ಘಟನಾವಳಿಗನುಸಾರವಾಗಿ ಉದ್ಭವಿಸಿದ ಪರಿಸ್ಥಿತಿಯಿಂದಾಗಿ ಹಾಗೂ ಪಂಚಾಯತ್ ರಾಜ್ ಕಾನೂನು ವಿಧಿಗಳು ಹಾಗೂ ನಿಯಮಗಳನ್ನು ಗಣನೆಗೆ ತೆಗೆದುಕೊಂಡು ವಿಶೇಷ ಷರತ್ತುಗಳನ್ನು ವಿಧಿಸಿ ಅವುಗಳನ್ನು ತಪ್ಪದೇ ಪಾಲಿಸಿ ಬರುವಂತೆ ಹಾಗೂ ಸಾಂದರ್ಭಿಕವಾಗಿ ಕ್ರಮ ಜರುಗಿಸುವ ಷರತ್ತುಗಳನ್ನು ಇಟ್ಟು ಸಾಮಾನ್ಯ ಸಭೆ ಸರ್ವಾನುಮತದ ಗೊತ್ತುವಳಿ ಸ್ವೀಕರಿಸಲಾಗಿದೆ, ಸದರಿ ಕಟ್ಟಡ ಕಾಮಗಾರಿ ಕುರಿತು ನೀಡಿದ ಷರತ್ತು ಉಲ್ಲಂಘನೆಯಾದಲ್ಲಿ ಕರ್ನಾಟಕ ಪಂಚಾಯತ್ ರಾಜ್ ಪ್ರಕರಣ 64 ನೇ ವಿಧಿಯಡಿಯಲ್ಲಿ ಪಂಚಾಯತಿಯವರು ಕಾನೂನು ಕ್ರಮ ಜರುಗಿಸಲು ಅಧಿಕಾರ ಹೊಂದಿದವರಿರುತ್ತಾರೆ ಹೊರತೂ ಆ ಬಗ್ಗೆ ಪಂಚಾಯತಿ ಚುನಾಯಿತ ಸದಸ್ಯರ ವಿರುದ್ಧ ಆಪಾದನೆ ಮಾಡಲಾಗಲೀ ಅವರನ್ನು ಹೊಣೆಗಾರರನ್ನಾಗಿ ಮಾಡಲು ಆಸ್ಪದವಿರುವುದಿಲ್ಲ ಎಂದು ತಿಳಿಸಿ ತಮ್ಮ ಮೇಲೆ ಕ್ರಮ ಕೈಗೊಳ್ಳಲು ಮುಂದಾಗಿರುವುದನ್ನು ಕೈಬಿಡಬೇಕಾಗಿ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಶ್ರೀಮತಿ ಭವಾನಿ ಕೋಂ ನಾರಾಯಣ, ಹಿಂದಿನ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು ಮತ್ತು ಶ್ರೀ ಆಸೀಫ್ ಅಲಿ ಅಬ್ದುಲ್ ಗಫಾರ ಗನಿ ಹಿಂದಿನ ಉಪಾಧ್ಯಕ್ಷರು ಹಾಗೂ ಹಾಲಿ ಸದಸ್ಯರು, ಚಂದಾವರ ಗ್ರಾಮ ಪಂಚಾಯತಿ, ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರುಗಳಿಗೆ ವಿಚಾರಣೆಗೆ ಹಾಜರಾಗಲು ತಿಳುವಳಿಕೆ ಪತ್ರ ನೀಡಲಾಗಿದ್ದು, ಸದರಿಯವರು ದಿನಾಂಕ: 17.08.2016 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ಇವರ ನ್ಯಾಯಾಲಯದಲ್ಲಿ ನಡೆದ ಮೌಖಿಕ ವಿಚಾರಣೆಗೆ ಹಾಜರಾಗಿರುತ್ತಾರೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ರವರ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ನಡೆಸಲಾಗಿದೆ. ದಾಖಲೆಗಳನ್ನು ಪರಿಶೀಲಿಸಲಾಗಿ ಚಂದಾವರ ಗ್ರಾಮದಲ್ಲಿ ಸರ್ವೆ ನಂ: 223/ಬಿ ರಲ್ಲಿ ರಾಜ್ಯ ಹೆದ್ದಾರಿಯಿಂದ ನಿಗಧಿತ ಸೆಟ್ ಬ್ಯಾಕ್ ಬಿಡದೆ ಶ್ರೀ ಮಾಮುಸಾಬ್ ಮೊದಲನೇ ಮಹಡಿ ಕಟ್ಟಡವನ್ನು ಕಟ್ಟುತ್ತಿದ್ದಾರೆ ಎಂದು ಸಾರ್ವಜನಿಕರು ಹೊನ್ನಾವರ ತಾಲ್ಲೂಕಿನ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಇವರಿಗೆ ದಿನಾಂಕ 20.01.2014 ರಂದು ದೂರು ನೀಡಿದ ಹಿನ್ನೆಲೆಯಲ್ಲಿ, ಸದರಿ ಕಟ್ಟಡ ಕಟ್ಟಲು ಲೋಕೋಪಯೋಗಿ ಇಲಾಖೆಯಿಂದ ಅನುಮತಿ/ಒಪ್ಪಿಗೆ/ನಿರಾಕ್ಷೇಪಣಾ ಪತ್ರ ಗಳನ್ನು ತೆಗೆದುಕೊಳ್ಳದೇ ಇರುವುದರಿಂದ ಕಟ್ಟಡ ಕಾಮಗಾರಿಯನ್ನು ನಿಲ್ಲಿಸುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಇವರು ಶ್ರೀ ಮಾಮುಸಾಬ್ ರವರಿಗೆ ದಿನಾಂಕ 27.01.2014 ರ ಪತ್ರದಲ್ಲಿ ತಿಳಿಸಿರುತ್ತಾರೆ ಮತ್ತು ಸದರಿ ಪತ್ರದ ಪ್ರತಿಯನ್ನು ಚಂದಾವರ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ ರವರಿಗೆ ಕಳುಹಿಸಿರುತ್ತಾರೆ. ಮುಂದುವರೆದು ಚಂದಾವರ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ ರವರಿಗೆ ಸದರಿ ಕಟ್ಟಡದ ಪರವಾನಗಿ ನೀಡುವ ಮುನ್ನ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಯಿಂದ ನಿಗಧಿತ ಸೆಟ್ ಬ್ಯಾಕ್ ಬಿಡುವ ಬಗ್ಗೆ ತಿಳಿಸಬೇಕೆಂದು ದಿನಾಂಕ 30.05.2014 ರ ಪತ್ರದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಇವರು ನಿರ್ದೇಶನ ನೀಡಿರುತ್ತಾರೆ.

ದಿನಾಂಕ 28.07.2014 ರಂದು ಚಂದಾವರ ಗ್ರಾಮ ಪಂಚಾಯತಿಯಲ್ಲಿ ನಡೆದ ಸಭೆಯಲ್ಲಿ ಸದರಿ ವಿಷಯದ ಬಗ್ಗೆ ನಡೆದ ಚರ್ಚೆಯಲ್ಲಿ ಚಂದಾವರ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ ರವರು ಸದರಿ ಕಟ್ಟಡದ ಪರವಾನಗಿ ನೀಡಲು ಕಾನೂನಿನ ತೊಡಕುಗಳನ್ನು ಸಭೆಯಲ್ಲಿ ತಿಳಿಸಿದ್ದರು ಮತ್ತು ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಯಿಂದ ನಿಗಧಿತ ಸೆಟ್ ಬ್ಯಾಕ್ ಬಿಡುವ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಇವರು ತಿಳಿಸಿದ್ದರೂ ಸಹ ಶ್ರೀಮತಿ ಭವಾನಿ ಕೋಂ ನಾರಾಯಣ, ಹಿಂದಿನ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು ಮತ್ತು ಶ್ರೀ ಆಸೀಫ್ ಅಲಿ ಅಬ್ದುಲ್ ಗಫಾರ ಗನಿ ಹಿಂದಿನ ಉಪಾಧ್ಯಕ್ಷರು ಹಾಗೂ ಹಾಲಿ ಸದಸ್ಯರು, ಚಂದಾವರ ಗ್ರಾಮ ಪಂಚಾಯತಿ, ಹೊನ್ನಾವರ ತಾಲ್ಲೂಕು ಇವರು ತಮ್ಮ ಅಧಿಕಾರ ವ್ಯಾಪ್ತಿ ಮೀರಿ ಸದರಿ ಕಟ್ಟಡ ಕಟ್ಟಲು ಪರವಾನಗಿ ನೀಡಲು ಸದರಿ ಸಭೆಯಲ್ಲಿ ಠರಾವು ಪಾಸು ಮಾಡಿದ್ದಾರೆ ಎಂದು ಕಂಡು ಬಂದಿದ್ದು, ಶ್ರೀಮತಿ ಭವಾನಿ ಕೋಂ ನಾರಾಯಣ, ಹಿಂದಿನ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು ಮತ್ತು ಶ್ರೀ ಆಸೀಫ್ ಅಲಿ ಅಬ್ದುಲ್ ಗಫಾರ ಗನಿ ಹಿಂದಿನ ಉಪಾಧ್ಯಕ್ಷರು ಹಾಗೂ ಹಾಲಿ ಸದಸ್ಯರು, ಚಂದಾವರ ಗ್ರಾಮ ಪಂಚಾಯತಿ, ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ರವರುಗಳು ಕರ್ತವ್ಯಲೋಪವೆಸಗಿರುವುದು ಕಂಡು ಬಂದಿರುವುದರಿಂದ ಸದರಿಯವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರಂತೆ ಚಂದಾವರ ಗ್ರಾಮ ಪಂಚಾಯತಿ ಸದಸ್ಯತ್ವದಿಂದ ತೆಗೆದುಹಾಕಲು ಸರ್ಕಾರವು ನಿರ್ಣಯಿಸಿದೆ. ಅದರಂತೆ ಈ ಕೆಳಕಂಡ ಆದೇಶ

-

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/232/ಗ್ರಾಪಂಕಾ/2015 ಬೆಂಗಳೂರು, ದಿನಾಂಕ:23.03.2017 .**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀಮತಿ ಭವಾನಿ ಕೋಂ ನಾರಾಯಣ, ಹಿಂದಿನ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು ಮತ್ತು ಶ್ರೀ ಆಸೀಫ್ ಅಲಿ ಅಬ್ದುಲ್ ಗಫಾರ ಗನಿ ಹಿಂದಿನ ಉಪಾಧ್ಯಕ್ಷರು ಹಾಗೂ ಹಾಲಿ ಸದಸ್ಯರು, ಚಂದಾವರ ಗ್ರಾಮ ಪಂಚಾಯತಿ, ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ರವರುಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕರ್ನಾಟಕ ಗ್ರಾಮ ಸ್ವರಾಜ್ ಮತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರನ್ವಯ ಚಂದಾವರ ಗ್ರಾಮ ಪಂಚಾಯತಿಯ ಸದಸ್ಯತ್ವ ಸ್ಥಾನದಿಂದ ತೆಗೆದುಹಾಕಿ ಆದೇಶಿಸಿದೆ.

**(ಮಾನ್ಯ ಪ್ರಧಾನ ಕಾರ್ಯದರ್ಶಿಯವರಿಂದ ಅನುಮೋದಿತ)**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಟಿ.ವಿ.ಅರುಣ್‌ಕುಮಾರ್)**
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿಗಳು:**

1) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
2) ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆ.
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಉತ್ತರ ಕನ್ನಡ ಜಿಲ್ಲೆ,
4) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.
5) ಶ್ರೀಮತಿ ಭವಾನಿ ಕೋಂ ನಾರಾಯಣ, ಹಿಂದಿನ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು, ಚಂದಾವರ ಗ್ರಾಮ ಪಂಚಾಯತಿ, ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.
6) ಶ್ರೀ ಆಸೀಫ್ ಅಲಿ ಅಬ್ದುಲ್ ಗಫಾರ ಗನಿ ಹಿಂದಿನ ಉಪಾಧ್ಯಕ್ಷರು ಹಾಗೂ ಹಾಲಿ ಸದಸ್ಯರು, ಚಂದಾವರ ಗ್ರಾಮ ಪಂಚಾಯತಿ, ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.
7) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಚಂದಾವರ ಗ್ರಾಮ ಪಂಚಾಯತಿ, ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.
8) ಗಣಕ ಕೋಶ – ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು.
9) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.